ಓ.ಎಸ್.186/2023 ಡಿ.ಡಬ್ಲು-1
*ಶಕುಂತಲಾ ಗಂಡ ಮಹಾಬಳೇಶ್ವರ*

ದಿ. 17-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ ಎ.ಪಿ.ಎಸ್.ಜೆ ವಕೀಲರಿಂದ:-**

ದಾವಾ ಜಮೀನಿನಲ್ಲಿ ಬಿತ್ತುವುದು ಮತ್ತು ಬೆಳೆಯುವುದನ್ನು ನಾನೇ ಮಾಡುತ್ತಿದ್ದೇನೆ. ಮೊದಲು ನಮ್ಮ ಮಾವ ಒತ್ತಿ ಹಾಕಿತ್ತು ಈಗ 3-4 ವರ್ಷಗಳಿಂದ ನಾನು ಸಾಗುವಳಿ ಮಾಡುತ್ತಿದ್ದೇನೆ. ನನ್ನ ಮದುವೆಯಾಗಿ 27-28 ವರ್ಷಗಳಾಗಿರುತ್ತವೆ. ನಮ್ಮ ಮಾವ ಜಮೀನುಗಳನ್ನು ಒತ್ತಿ ಹಾಕಿಲ್ಲ ನಮ್ಮ ಅತ್ತೆ ಹಾಕಿರುತ್ತಾಳೆ. ನಮ್ಮ ಅತ್ತೆ ನಮ್ಮ ಸಣ್ಣಮಾವ ಗುರುಸಿದ್ದಪ್ಪನವರಿಗೆ ಒತ್ತಿ ಹಾಕಿದ್ದಳು. ಗುರುಸಿದ್ದಪ್ಪನ ಮಗ ಮಹಾದೇವಪ್ಪ ಎಂದರೆ ಸರಿ. ಗುರುಸಿದ್ದಪ್ಪ ತೀರಿಕೊಂಡು 5-6 ವರ್ಷಗಳಾಗಿರುತ್ತವೆ. ಒತ್ತಿ ಪತ್ರವನ್ನು ಸ್ಟ್ಯಾಂಪಿನಲ್ಲಿ ಬರೆಸಿರುವುದನ್ನು ಕೇಳಿರುತ್ತೇನೆ. ನಮ್ಮ ಮನೆಯಲ್ಲಿ ಎಲ್ಲಾ ವ್ಯವಹಾರಗಳನ್ನು ಹಿರಿಯರು ಮಾಡುತ್ತಿದ್ದರು ನಾನು ಮಾಡುತ್ತಿರಲಿಲ್ಲ. ಒತ್ತಿ ಹಾಕಿದ ವಿಚಾರ ನನ್ನ ಗಂಡನಿಂದ ಗೊತ್ತಾಗಿರುತ್ತದೆ. ನನ್ನ ಗಂಡ ಮದ್ಯವ್ಯಸನಿಯಾಗಿದ್ದ ಅವರು ಕೂಗಾಡುವಾಗ ನನಗೆ ವಿಷಯ ಗೊತ್ತಾಗಿರುತ್ತದೆ. ಒತ್ತಿ ಹಾಕಿದ್ದನ್ನು ನಾನು ರೂ.1,00,000/- ಕೊಟ್ಟು ಬಿಡಿಸಿಕೊಂಡಿರುತ್ತೇನೆ. ನಾವು ಗುರುಸಿದ್ದಪ್ಪರವರಿಗೆ ರೂ.1,00,000/- ಕೊಟ್ಟು ಬಿಡಿಸಿದ ಬಗ್ಗೆ ಕಾಗದ ಪತ್ರ ಮಾಡಿಕೊಂಡಿರುವುದಿಲ್ಲ. ಕಾರಣ ನಾವು ಮನೆ-ಮನೆಯವರಾಗಿರುತ್ತೇವೆ. ಎಷ್ಟು ಹಣಕ್ಕೆ ಒತ್ತಿ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಮ್ಮ ಮಾವ ಇಷ್ಟು ರೊಕ್ಕ ಕೊಡು ಎಂದು ಕೇಳಿದ್ದಕ್ಕೆ ನಾನು ಕೊಟ್ಟಿರುತ್ತೇನೆ. ಈಗ 5-6 ವರ್ಷಗಳ ಹಿಂದೆ ನಾವು ರೂ.1,00,000/- ಕೊಟ್ಟು ಬಿಡಿಸಿಕೊಂಡಿರುತ್ತೇನೆ.

2. ನನ್ನ ಮಗಳ ವಿದ್ಯಾಭ್ಯಾಸಕ್ಕಾಗಿ ವರ್ಷಕ್ಕೆ ರೂ.1,50,000/- ಗಳ ಖರ್ಚು ಬರುತ್ತದೆ ಎಂದು ಬರೆಸಿರುತ್ತೇನೆ. ನನ್ನ ಮಗಳು ಈಗ ಡಿಗ್ರಿ ಮುಗಿಸಿರುತ್ತಾಳೆ. ನನ್ನ ಮಗಳ 3 ವರ್ಷದ ವಿದ್ಯಾಭ್ಯಾಸಕ್ಕಾಗಿ 4-5 ಲಕ್ಷ ನಾನೇ ದುಡಿದು ಖರ್ಚು ಮಾಡಿರುತ್ತೇನೆ ಎಂದರೆ ಸರಿ. ನನಗೆ ವರ್ಷಕ್ಕೆ 2-3 ಲಕ್ಷ ಆದಾಯ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಅಣ್ಣ ಮತ್ತು ನಾವು ಖರ್ಚು ಮಾಡಿ ಓದಿಸಿರುತ್ತೇವೆ. ನನ್ನ ಮಗಳ ವಿದ್ಯಾಭ್ಯಾಸಕ್ಕೆ ಮತ್ತು ನನ್ನ ಗಂಡನ ಆಸ್ಪತ್ರೆಯ ಖರ್ಚಿಗಾಗಿ ನನ್ನ ಅಣ್ಣ ಮತ್ತು ನಮ್ಮ ಸಂಬಂಧಿಕರು ಹಣಕಾಸಿನ ಸಹಾಯ ಮಾಡಿದ್ದಾರೆ ಎಂದು ಬರೆಸಿರುತ್ತೇನೆ.

3. ಸರ್ವೆ ನಂ.35 ವಿಸ್ತೀರ್ಣ 4 ಎಕರೆ 37 ಗುಂಟೆ ಜಮೀನನ್ನು ನಮ್ಮ ಮಾವ ಖರೀದಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸರ್ವೆ ನಂ.35 ಕ್ಕೆ ಸಂಬಂಧಿಸಿದಂತೆ ನಾಡಕಚೇರಿ

ಗುರುಗುಂಟಾದಲ್ಲಿ ಕೇಸು ನಡೆದಿತ್ತು ಎಂದರೆ ಸರಿ. ಸಾಕ್ಷಿಗೆ ದಿನಾಂಕ 17-03-2023 ರ ತಕರಾರಿನ ದೃಡಿಕೃತ ನಕಲನ್ನು ಮತ್ತು ತಹಶೀಲ್ದಾರರವರ ಕಚೇರಿಯ ಆರ್.ಆರ್.ಟಿ.ನಂ.122/2023-2024 ದಿನಾಂಕ 06-10-2023 ರ ದೃಡಿಕೃತ ನಕಲನ್ನು ತೋರಿಸಲಾಗಿ ಅದರಲ್ಲಿರುವ ಸಹಿ ಮತ್ತು ಅಂಶಗಳನ್ನು ಒಪ್ಪಿದ್ದರಿಂದ ಅವುಗಳನ್ನು ನಿ.ಪಿ-೮ ಮತ್ತು ೯ ಎಂದು ಗುರುತಿಸಲಾಯಿತು. 2ನೇ ಪ್ರತಿವಾದಿಯ ಗಂಡ ಒಳಗೊಳಗೆ ಬಯಲು ಜಾಗವನ್ನು ಮತ್ತು ಜಮೀನನ್ನು ತನ್ನ ಹೆಸರಿಗೆ ಮಾಡಿಸಿಕೊಂಡಿರುತ್ತಾನೆ. ಮನೆ ನಂ.510 ನಮ್ಮ ಮನೆತನಕ್ಕೆ ಸಂಬಂಧ ಪಡದ ಆಸ್ತಿಯಾಗಿದ್ದು ಅದನ್ನು 2ನೇ ಪ್ರತಿವಾದಿಯ ಗಂಡನಿಗೆ ಸರ್ಕಾರದವರು ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ.

4. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ವಿಷಯಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಈಗ ವಾದಿಯು ತನ್ನ ಅಳಿಯನಾದ 2ನೇ ಪ್ರತಿವಾದಿಯ ಗಂಡನೊಂದಿಗೆ ಹೊನ್ನಳ್ಳೀ ಗ್ರಾಮದದಲ್ಲಿ ನೆಲೆಸಿದ್ದು ಅಲ್ಲಿ ವಾಸವಿರುತ್ತಾಳೆ ಎಂದರೆ ಸರಿ. ವಾದಿಯ ಊಟ, ಬಟ್ಟೆ ಮತ್ತು ಆಸ್ಪತ್ರೆಯ ಖರ್ಚನ್ನು 2ನೇ ಪ್ರತಿವಾದಿಯ ಗಂಡ ನೋಡಿಕೊಳ್ಳುತ್ತಿದ್ದಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿ ೮ ಎಕರೆ ಹೊಲವನ್ನು ಮಾರಿರುತ್ತಾಳೆ ಎಂದು ನುಡಿಯುತ್ತಾರೆ. 5 ಎಕರೆ ಹೊಲವನ್ನು ಶಾಂತಮ್ಮಳಿಗೆ ಮತ್ತು 3 ಎಕರೆ ಹೊಲವನ್ನು ಗುರುಸಿದ್ದಪ್ಪನ ಮಗನಿಗೆ ಮಾರಾಟ ಮಾಡಿದ್ದಾಳೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ. ನಾನು ಈ ವಿಷಯಗಳನ್ನು ಪ್ರತಿವಾದ ಪತ್ರದಲ್ಲಿ ಬರೆಸಿರುವುದಿಲ್ಲ.

5. 7 ವರ್ಷದ ಹಿಂದೆ ನನ್ನ ಗಂಡ ತೀರಿಕೊಂಡಿದ್ದು ಆತನ ಆಸ್ಪತ್ರೆಯ ಖರ್ಚಿಗಾಗಿ ಮತ್ತು ನನ್ನ ಮಗಳ ವಿದ್ಯಾಭ್ಯಾಸಕ್ಕಾಗಿ ಸಾಲ ಮಾಡಿದ್ದೇನೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುತ್ತೇನೆ. ನನ್ನ ಬ್ಯಾಂಕ್ ಸ್ಟೇಟಮೆಂಟ್ ಜೊತೆ ಬ್ಯಾಂಕಿನವರು ಯಾವುದೇ ಪ್ರಮಾಣ ಪತ್ರ ಕೊಟ್ಟಿರುವುದಿಲ್ಲ. ನಾನು ತೆಗೆದುಕೊಂಡ ಎಲ್ಲಾ ಸಾಲಗಳನ್ನು ಒಟ್ಟಿಗೆ ಸೇರಿಸಿದರೆ ರೂ.3,00,000/- ಆಗುವದಿಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ಸಾಲದ ಖಾತೆ ಒಟ್ಟು ರೂ.2,00,396/- ಎಂದು ತೋರಿಸುತ್ತದೆ ಎಂದರೆ ಸರಿಯಲ್ಲ. ನಾನು ಬ್ಯಾಂಕಿನ ದಾಖಲೆಗಳನ್ನು ನನ್ನ ಜೊತೆ ತಂದಿರುತ್ತೇನೆ ಎಂದರೆ ಸರಿ. ಬ್ಯಾಂಕಿನ ತಖ್ತೆಗಳನ್ನು ನನ್ನೊಟ್ಟಿಗೆ ತಂದಿದ್ದು ಯಾವುದೇ ಸಿಬ್ಬಂದಿ ನನ್ನ ಜೊತೆ ಬಂದಿಲ್ಲ ಎಂದರೆ ಸರಿ. ನಿ.ಡಿ-14 ರ ಸರ್ವೆ ನಂ.35 ಎಕರೆ 4 ಎಕರೆ 37 ಗುಂಟೆ ವಿಭಾಗದ ಪ್ರಕಾರ ಚೆನ್ನವೀರಮ್ಮ ಗಂಡ ಅಮರೇಶಪ್ಪ ರವರಿಗೆ ವರ್ಗಾವಣೆಯಾಗಿದೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಅಟಲ್ ವಾಜಪೇಯಿ ಯೋಜನೆ ಅಡಿಯಲ್ಲಿ ಉಚಿತವಾಗಿ ಚಿಕಿತ್ಸೆ ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ. ಕೆರೂಡಿ ಆಸ್ಪತ್ರೆಯಲ್ಲಿ ನಿ.ಡಿ-1 ರ ಪ್ರಕಾರ ಕೈ ಬರಹದಲ್ಲಿ ಬರೆಯುವದಿಲ್ಲ ಎಂದರೆ ಸರಿಯಲ್ಲ. ನನ್ನ

ಮಗಳು ಹೋದ ವರ್ಷ ಡಿಗ್ರಿ ಮುಗಿಸಿರುತ್ತಾಳೆ ಎಂದರೆ ಸರಿ. ನಿ.ಡಿ-೩ ರಲ್ಲಿ ದಿನಾಂಕದ ತಿದ್ದುಪಡಿಯಾಗಿದೆ ಎಂದರೆ ಸರಿಯಲ್ಲ. ನನ್ನ ಗಂಡ ಬದುಕಿದ್ದರೆ ನನ್ನ ಅತ್ತೆಯನ್ನು ನೋಡಿಕೊಳ್ಳುವ ಜವಾಬ್ದಾರಿ ಇತ್ತು ಎಂದರೆ ಸರಿ. ಆತ ತೀರಿಕೊಂಡ ನಂತರ ನಮ್ಮ ಅತ್ತೆಯನ್ನು ನೋಡಿಕೊಳ್ಳುವ ಹೊಣೆಗಾರಿಕೆ ನನ್ನ ಮೇಲೆ ಇದೆ ಎಂದರೆ ಸರಿಯಲ್ಲ. ನಾನು ಅವರನ್ನು ನೋಡಿಕೊಳ್ಳುವುದಿಲ್ಲ ಎಂದು ಹೇಳಿರುವುದಿಲ್ಲ. ಚನ್ನವೀರಮ್ಮ ಆಕೆಯ ಗಂಡ ಮತ್ತು ಮಕ್ಕಳು ನೋಡಿಕೊಳ್ಳುವ ಜವಾಬ್ದಾರಿ ಇರುವದಿಲ್ಲ ನಾನೇ ನೋಡಿಕೊಳ್ಳಬೇಕು ಎಂದರೆ ಸರಿ. ಚನ್ನವೀರಮ್ಮ ಮತ್ತು ಅವರ ಗಂಡ ಮತ್ತು ಮಕ್ಕಳು ನಮ್ಮ ವಂಶಾವಳಿಯಲ್ಲಿ ಬರುವದಿಲ್ಲ ಎಂದರೆ ಸರಿ. ನನ್ನ ಗಂಡ ತೀರಿಕೊಂಡು 7-8 ವರ್ಷಗಳಾಗಿರಬಹುದು. ನಾನು ವಾದಿಯನ್ನು ನಮ್ಮ ಮನೆಯಲ್ಲಿ ಇಟ್ಟುಕೊಳ್ಳದೆ ಊಟ ಬಟ್ಟೆ ಕೊಡದೆ ತಿರಸ್ಕಾರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಹೊಲಿಗೆ ಯಂತ್ರ ಮತ್ತು ಅಂಗಡಿಯಿಂದ ವಾರ್ಷಿಕ ರೂ.೩೦,೦೦೦/- ಆದಾಯ ಬರುತ್ತದೆ ಎಂದರೆ ಸರಿಯಲ್ಲ. ಎ.ಸಿ ರವರ ಆದೇಶ ಇದ್ದರೂ ಕೂಡ ನಾವು ವಾದಿಯನ್ನು ಮನೆಯಿಂದ ಹೊರ ಹಾಕಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಗಂಡ ತೀರಿಕೊಂಡಾಗ ಮತ್ತು ನನ್ನ ಮಗಳ ವಿದ್ಯಾಬ್ಯಾಸಕ್ಕಾಗಿ ಸಾಲ ಮಾಡಿರುವುದಿಲ್ಲ ಇತ್ತೀಚೇಗೆ ಸಾಲ ಮಾಡಿ ದಾಖಲೆ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.